ಮುಳುಗಿರುತ್ತದೆ ಎಂದರೂ ತಪ್ಪಲ್ಲ. ಇದು ರಾಣಿ ಹುಳುವನ್ನು ಇತರೆ ಸಾಮಾನ್ಯ ಹುಳುಗಳಿಂದ ಬೇರ್ಪಡಿಸುತ್ತದೆ ಮೇಬಲ್...''

''ಇದನ್ನು ನಾನು ನಂಬಲು ತಯಾರಿಲ್ಲ ಆಲ್ಬರ್ಟ್.''

''ಇದು ಈಗಾಗಲೇ ಸಿದ್ಧಪಡಿಸಿರುವ ವಿಚಾರ ಮೇಬಲ್. ನಾನು ಮತ್ತೊಮ್ಮೆ ಸಿದ್ಧಪಡಿಸುವ ಅಗತ್ಯವೇ ಇಲ್ಲ. ಇದೆಲ್ಲಾ ಈ ರಾಜಪಾಕದ ಕಾರಣದಿಂದಾಗಿ... ಸೋಜಿಗವಲ್ಲವೇ? ಸಾಮಾನ್ಯ ಜೇನು ಹುಳುಗಳಿಗೂ, ರಾಣಿ ಹುಳುವಿಗೂ ಏನು ವ್ಯತ್ಯಾಸ ಬಲ್ಲೆಯಾ ಮೇಬಲ್? ಆಹಾರ. ಅಲ್ಲದೆ, ಹೊಟ್ಟೆಯಲ್ಲಿ, ಕೊಕ್ಕಿನಲ್ಲಿ, ಹಾಗೂ ಕಾಲುಗಳಲ್ಲಿ...''

''ಕೇವಲ ಪಥ್ಯದಿಂದಾಗಿ ಇಷ್ಟೊಂದು ವ್ಯತ್ಯಾಸ ಆಗುತ್ತದೆಂದು ನಂಬುವುದು ಕಷ್ಟ!''

''ನಿಜ ಕಣೆ ಮೇಬಲ್. ನಿನಗೊಬ್ಬಳಿಗೇ ಅಲ್ಲ. ಜಗತ್ತಿನ ದೊಡ್ಡ ದೊಡ್ಡ ವಿಜ್ಞಾನಿಗಳಿಗೂ ಇದೇ ಪ್ರಶ್ನೆ ಕಾಡಿದೆ...'' ಅವನು ಎದ್ದು ತನ್ನ ಪುಸ್ತಕದ ಕಪಾಟಿನೊಳಗೆ ತಡಕಾಡಿದ. **American Bee Journal** ಎಂಬ ನಿಯತಕಾಲಿಕದಿಂದ ಓದತೊಡಗಿದ:

''ಇನ್ಸುಲಿನನ್ನು ಕಂಡು ಹಿಡಿದು ಮನುಕುಲಕ್ಕೆ ಮಹತ್ತುಪಕಾರ ಮಾಡಿದ್ದ ಕೆನಡಾದ ವಿಜ್ಞಾನಿ ಡೊ. ಫ್ರೆಡ್ರಿಕ್ ಎ. ಬ್ಯಾಂಟಿಂಗ್‌ನಿಗೆ ಸನ್ಮಾನಿಸಿ ಟೊರೊಂಟೊದಲ್ಲಿ ಅವನಿಗೆ ಒಂದು ಅತ್ಯಾಧುನಿಕ ಪ್ರಯೋಗಶಾಲೆಯನ್ನು ಕಟ್ಟಿಸಿಕೊಟ್ಟರು. 'ರಾಜಪಾಕ'ದ ಬಗ್ಗೆ ಆಸಕ್ತನಾಗಿ ಡಾ. ಬ್ಯಾಂಟಿಂಗ್ ಇಲ್ಲಿ ಸಂಶೋಧನೆಯಲ್ಲಿ ತೊಡಗಿದ... ಅದು ಸಾಯಲಿ, ವಿವರಗಳಿಗಿಳಿಯದೆ ಹೇಳುವುದಾದರೆ ಅಲ್ಲಿ ಅವನು ರಾಜಪಾಕದಲ್ಲಿ ಫೆನೋಲ್ಸ್, ಸ್ಟೆರೊಲ್ಸ್, ಗ್ಲಿಸೆರಿಲ್ಸ್, ಡೆಕ್ಸ್ಟ್ರೋಸ್ ಮತ್ತೂ ಶೇ 80ರಿಂದ 85 ಹೆಸರಿಲ್ಲದ ಆಮ್ಲಗಳನ್ನು ಪತ್ತೆ ಮಾಡಿದ.''

ತಾನೇ ಆ ವಿಜ್ಞಾನಿ ಎಂಬಂತೆ ಮುಗುಳ್ನಗುತ್ತಾ ಪುಸ್ತಕಗಳ ಬೀರುವಿನ ಮುಂದೆ ನಿಂತಿದ್ದ ಆಲ್ಬರ್ಟನನ್ನು ಮೇಬಲ್ ಕಣ್ಣು ಹಿಗ್ಗಿಸಿ ನೋಡಿದಳು. ಅವಳ ಬಾಯಿ ತೆರೆದುಕೊಂಡಿತ್ತು.

''ಹೆಸರಿಲ್ಲದ ಆಮ್ಲಗಳು... ಅಂತಂದ್ರೆ ಏನು ಆಲ್ಬರ್ಟ್?'' ಎಂದಳು ಮೇಬಲ್.

''ಇಲ್ಲೇ ಇರುವುದು ಮಜಾ ಕಣೆ ಮೇಬಲ್! ಅವುಗಳೇನೆಂದು ಆ ಬ್ಯಾಂಟಿಗ್ ಮಹಾಶಯನಿಗೂ ಗೊತ್ತಿಲ್ಲವಂತೆ!''

ಆಲ್ಬರ್ಟ್ ನೋಡಲು ಸುಂದರಾಂಗ ಎಂದೇನೂ ಕರೆಯುವಂತಿರಲಿಲ್ಲ. ಸ್ವಲ್ಪ ಕುಳ್ಳಗೆ ದಪ್ಪಗಿದ್ದ. ಮೈ ತುಂಬಾ ರೋಮಗಳು. ಇತ್ತೀಚೆಗೆ ಗಡ್ಡವನ್ನೂ ಹೆರೆಯದೆ ಅವಳಿಗೆ ಆಲ್ಬರ್ಟ್ ಕೂಡ ಒಂದು ರಾಣಿ ಜೇನುಹುಳದಂತೆಯೇ ಕಾಣಿಸತೊಡಗಿದ. ಮೇಬಲ್ ಎಲ್ಲೋ ಕೇಳಿದ್ದಳು. ಕುದುರೆಗಳೊಂದಿಗೆ ಜೀವಮಾನ ಸವೆಸಿದವರು ಬರಬರುತ್ತಾ ಕುದುರೆಗಳಂತೆಯೇ ಕಾಣಿಸುತ್ತಾರಂತೆ! ಹಾಗೇ, ವಿವಿಧ ಪ್ರಾಣಿಗಳ ಜೊತೆಯಲ್ಲಿದ್ದವರು ಅವುಗಳ ಹಾವಭಾವವನ್ನೇ ಬೆಳೆಸಿಕೊಂಡಿರುತ್ತಾರಂತೆ! ಈವರೆಗೆ ಅವಳು ಆಲ್ಬರ್ಟನನ್ನು ಆ ದೃಷ್ಟಿಯಲ್ಲಿ ನೋಡಿರಲಿಲ್ಲ. ಈಗ ಅವನು ಜೇನುಹುಳದ ತದ್ರೂಪಿಯಂತೆಯೇ ಕಾಣಿಸುತ್ತಿರುವುದು ಕಂಡು ಅವಳಿಗೆ ಆಘಾತವಾಯಿತು.

''ಸ್ವತಃ ಬ್ಯಾಂಟಿಂಗನೇ ರಾಜಪಾಕವನ್ನು ತಿಂದಿದ್ದು ಎಲ್ಲಾದರೂ ಉಲ್ಲೇಖ ಇದೆಯಾ ಆಲ್ಬರ್ಟ್?'' ಅವಳು ಕೇಳಿದಳು.

''ಇಲ್ಲಾಂತ ಅನ್ಸುತ್ತೆ ಮೇಬಲ್. ತಿನ್ನುವಷ್ಟು ಅವನಿಗೆ ಸಿಗಬೇಕಿತ್ತಲ್ಲ?''

''ನಿಜ ಹೇಳಲಾ ಆಲ್ಬರ್ಟ್?... ನೀನ್ಯಾಕೋ ನನಗೆ ರಾಣಿ ಹುಳದಂತೆಯೇ ಕಾಣಿಸುತ್ತಿದ್ದೀಯ ಡಿಯರ್...'' ಅವಳು ನಗುತ್ತಾ ಹೇಳಿದಳು. ''ಬಹುಶಃ ನಿನ್ನ ಗಡ್ಡದಿಂದ ಅಂತ ಕಾಣ್ಸುತ್ತೆ. ಮೊದಲು ಅದನ್ನು ಹೆರೆದು ಹಾಕು.''

''ಏನ್ ಮಾತಾಡ್ತಿಯಾ ಮೇಬಲ್?'' ಅವನು ಸಿಡಿಮಿಡಿಗೊಂಡು ಹೇಳಿದ. ''ನಿನಗೆ ಮುಂದಿನದು